# ಕ್ಷೇತ್ರೇ ಕ್ಷೇತ್ರೇ ಧರ್ಮಂ ಕುರು

ವಿ. ಲಕ್ಷ್ಮೀಶ

ಭಗವದ್ಗೀತೆಯಲ್ಲಿನ ಪ್ರತಿಯೊಂದು ಪದದ ಅನುಸಂಧಾನವೂ ಗೀತೆಯಲ್ಲಿನ ಜೀವನ ದರ್ಶನವನ್ನು ಅರಿಯಲು ನೆರವಾಗುತ್ತದೆ. ಗೀತೆಯ ಮೊದಲಕ್ಷರಗಳ ಅನುಸಂಧಾನವನ್ನು ಮಾಡಿರುವ ವಿ. ಲಕ್ಷ್ಮೀಶ ಅವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.

ಅದೊಂದು ಗೀತಾಯಜ್ಞ. ಅದು ಪ್ರಾರಂಭವಾದದ್ದು "ಧರ್ಮಕ್ಷೇತ್ರೇ ಕುರುಕ್ಷೇತ್ರೇ" ಎಂಬ ಶ್ಲೋಕದ ವ್ಯಾಖ್ಯಾನದಿಂದ. ಅವ್ಯಾಹತವಾಗಿ ಏಳು ದಿನಗಳು ಈ ಯಜ್ಞ ನಡೆಯಿತು. ಧರ್ಮವಾವುದು ಅಧರ್ಮವಾವುದು ಎಂದು ಅರ್ಜುನನಿಗೆ ತಿಳಿಸಿಕೊಟ್ಟ ಗೀತಾಚಾರ್ಯ **ಕ್ಷೇತ್ರೇ ಕ್ಷೇತ್ರೇ ಧರ್ಮಂ ಕುರು** ಎಂಬ ಅಭಿಪ್ರಾಯ ಬರುವಂತಹ ಒಂದು ಸಂದೇಶವನ್ನು ನಮಗೆ ಬಿಟ್ಟುಹೋಗಿದ್ದಾನೆ. "ಮುಖ್ಯವಾಗಿ ಫಲಾಪೇಕ್ಷೆಯಿಲ್ಲದೆ ವಿಹಿತವಾದ ಕರ್ಮವನ್ನು ಆಚರಿಸುವುದೇ ಧರ್ಮ. ಆದರಿಂದ ಮಾತ್ರವೇ ವ್ಯಕ್ತಿ ಹಾಗೂ ಸಮಷ್ಟಿಯ ಪ್ರಗತಿಯನ್ನು ಸಾಧಿಸಬಹುದು" ಎಂಬ ಮಾತುಗಳಿಂದ ಆ ಗೀತಾಯಜ್ಞ ಮುಕ್ತಾಯವಾಯಿತು. ಕ್ಷೇತ್ರೇ ಕ್ಷೇತ್ರೇ ಧರ್ಮಂ ಕುರು ಎಂಬ ಉಪದೇಶದ ಅರ್ಥವನ್ನು ಮನಸ್ಸು ಮೆಲಕು ಹಾಕುತ್ತಿತ್ತು.

ಧರ್ಮ ಶಬ್ದಕ್ಕೆ ವಿಸ್ತಾರವೂ ವಿಭಿನ್ನವೂ ಆದ ಅರ್ಥವಿದೆ. **ಧಾರಣಾದ್ಧರ್ಮ ಇತ್ಯಾಹುಃ; ಯತೋಽಭ್ಯುದಯನಿಃಶ್ರೇಯಸಸಿದ್ಧಿಃ ಸ ಧರ್ಮಃ ; ಧಾರಯತೀತಿ ಧರ್ಮಃ ;** ಇತ್ಯಾದಿ. ಪಾಲಿಸುವ, ಪೋಷಿಸುವ, ಅಭ್ಯುದಯ ನಿಃಶ್ರೇಯಸ್ಸುಗಳಿಗೆ ಕಾರಣವಾಗುವ ತತ್ತ್ವ ಧರ್ಮ ಎಂದು ತಿಳಿಯಬಹುದಾಗಿದೆ. ಆದರೆ ವಯೋಧರ್ಮ, ಕಾಲಧರ್ಮ, ದೇಶಧರ್ಮ ಎಂದು ವಿಶೇಷವಾಗಿ ಬಳಸಿದಲ್ಲಿ ಧರ್ಮ ಎಂಬುದು ಗುಣಸ್ವಭಾವ ಎಂಬ ಅರ್ಥವುಳ್ಳದ್ದಾಗಿರುತ್ತದೆ. ವಿದ್ಯಾರ್ಥಿಯ ಧರ್ಮ, ಪೋಷಕರ ಧರ್ಮ, ಆಡಳಿತಗಾರರ ಧರ್ಮ ಎಂಬ ಹಿನ್ನೆಲೆಯಲ್ಲಿ ಧರ್ಮ ಶಬ್ದವು "ಕರ್ತವ್ಯ" ಎಂಬ ಅರ್ಥವನ್ನೂ ಸೂಚಿಸುತ್ತದೆ. ಈ ಅರ್ಥದಲ್ಲಿ "ಕ್ಷೇತ್ರೇ ಕ್ಷೇತ್ರೇ ಧರ್ಮಂ ಕುರು"—ಪ್ರತಿಯೊಂದು ಕ್ಷೇತ್ರದಲ್ಲೂ ನಿನ್ನ ಕರ್ತವ್ಯವನ್ನು ಮಾಡು ಎಂಬುದು ಗೀತೆಯ ಉಪದೇಶವೆಂದು ನಿರ್ಣಯಿಸಬಹುದು.

"ಕ್ಷೇತ್ರ" ಅಂದರೆ ಯಾವುದು? ಪ್ರತಿಯೊಬ್ಬ ವ್ಯಕ್ತಿಗೂ ಶೈಶವ, ಬಾಲ್ಯ, ಕೌಮಾರ, ಯೌವನ, ವೃದ್ಧಾಪ್ಯ ಇತ್ಯಾದಿಯಾಗಿ ಜೀವನದ ವಿಭಿನ್ನ ಹಂತಗಳಲ್ಲಿ ಕ್ಷೇತ್ರವು ಬದಲಾಗುತ್ತ ಹೋಗುವುದು. ಬಾಲ್ಯದ ಕ್ಷೇತ್ರದಲ್ಲಿ ಕೇವಲ ಆಟಪಾಠ, ಪರಿಸರದ ಅನುಕರಣೆ, ಗುರುಹಿರಿಯರ ಅನುಸರಣೆಯಷ್ಟೇ ಕರ್ತವ್ಯವಾಗುತ್ತದೆ. ಬಾಲ್ಯದ ನಂತರದ ಕ್ಷೇತ್ರದ ಕರ್ತವ್ಯ ವಿದ್ಯಾರ್ಜನೆ—ಒಂದು ಕ್ಷಣವೂ ವ್ಯರ್ಥವಾಗದಂತೆ ವಿದ್ಯೆಯ ಗಳಿಕೆಯಲ್ಲಿ ತೊಡಗಿಸಿಕೊಳ್ಳುವುದೇ ಆ ಹಂತದ ಕರ್ತವ್ಯ. ಕಲಿಕೆಯ ವ್ಯಾಪ್ತಿ ಪಠ್ಯಪುಸ್ತಕಗಳಿಗೂ ಮೀರಿದ್ದು. ದೈಹಿಕ, ಮಾನಸಿಕ ತರಬೇತಿಯಲ್ಲಿ ಯಾವ ಆಲಸ್ಯವೂ ಇಲ್ಲದೆ ತೊಡಗಿಸಿಕೊಳ್ಳುವುದರಲ್ಲೇ ವಿದ್ಯಾರ್ಥಿಯ ಗಮನ ಕೇಂದ್ರಿತವಾಗಿರಬೇಕಾಗುತ್ತದೆ.

ಮುಂದೆ ವಿದ್ಯಾರ್ಜನೆಯ ನಂತರ ಯಾವುದಾದರೂ ಒಂದು ವೃತ್ತಿಯನ್ನವಲಂಬಿಸಿ ಉದ್ಯೋಗರತನಾಗುವ ಹಂತ, ಬದುಕಿನಲ್ಲಿ ನೆಲೆಯೂರಿ ಗೃಹಸ್ಥನಾಗುವುದು. ಗೃಹಸ್ಥಾಶ್ರಮ ಅತ್ಯಂತ ಜವಾಬ್ದಾರಿಯುಳ್ಳ ಒಂದು ಹಂತ. ಹೇಗೆ ಮರವು ನಾನಾವಿಧ ಪಶುಪಕ್ಷಿಗಳಿಗೆ ಆಸರೆಯನ್ನಿತ್ತು, ನೆರಳನ್ನಿತ್ತು ಅವುಗಳ ಬಾಳುವೆಗೆ ಸಹಕರಿಸುವುದೋ, ಹಾಗೆ ಇತರ ಎಲ್ಲ ರೀತಿಯ ಆಶ್ರಿತರನ್ನು ಪಾಲಿಸುವ ಪೋಷಿಸುವ ಹೊಣೆ ಗೃಹಸ್ಥಾಶ್ರಮಿಯದಾಗಿರುತ್ತದೆ. ಗೃಹಸ್ಥಾಶ್ರಮದಲ್ಲಿ ತನಗಿರುವ ಋಣಗಳ ಭಾರವನ್ನು ತೀರಿಸಲು ವ್ಯಕ್ತಿ ತಾನು ಅವಲಂಬಿಸಿರುವ ವೃತ್ತಿ ಅವನಿಗೆ ನೆರವಾಗುತ್ತದೆ. ಆದ್ದರಿಂದ ಅವನ ಪಾಲಿಗೆ ಬಂದ ವೃತ್ತಿಯೂ ಒಂದು ಕ್ಷೇತ್ರವಾಗುತ್ತದೆ. ಆ ವೃತ್ತಿಯನ್ನು ಪ್ರಾಮಾಣಿಕವಾಗಿ, ಶ್ರದ್ಧಾಭಕ್ತಿಪೂರ್ವಕವಾಗಿ ನಿರ್ವಹಿಸಬೇಕು. ಯಾವುದೇ ವೃತ್ತಿಯಲ್ಲಿ ಮೇಲುಕೀಳು ಎಂಬ ಭೇದಭಾವ ಬರಕೂಡದು, ಮತ್ತು ಅಲ್ಲಿ ಔದಾಸೀನ್ಯಕ್ಕೆ ಎಡೆಯಿಲ್ಲ. ಹಡಗು ತಯಾರಿಸುವ ಮರದ ಹಲಗೆಗೆ ಮೊಳೆ ಹೊಡೆಯುವ ಕೆಲಸವಾಗಿರಬಹುದು. ಈ ಕೆಲಸದಲ್ಲಿ ಔದಾಸೀನ್ಯ ತೋರಿದರೆ ದೇಶದ ಹಡಗೇ ಮುಳುಗುತ್ತದೆ. ಪಾದರಕ್ಷೆ ಹೊಲೆಯುವ ವೃತ್ತಿ, ಬಟ್ಟೆ ಹೊಲಿಯುವ ವೃತ್ತಿ, ಕಸಗುಡಿಸುವ ವೃತ್ತಿ, ಶಿಕ್ಷಕ ವೃತ್ತಿ—ಹೀಗೆ ಯಾವುದೇ ವೃತ್ತಿ ಇರಲಿ ಅದನ್ನು ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಯಿಂದ ಸೇವಾಭಾವದಿಂದ ನಿರ್ವಹಿಸಬೇಕು. ಆದರಿಂದ ವೃತ್ತಿಸಂತೃಪ್ತಿ (job satisfaction) ದೊರೆಯುತ್ತದೆ. ಆ ಜೀವಿಯ ತೃಪ್ತಿಯ ಅಲೆಗಳು, ಶುಭಕಾಮನೆಗಳು ಒಂದು ಒಳ್ಳೆಯ ಪ್ರಭಾವವನ್ನು ಸುತ್ತ ಮುತ್ತಲಿನ ವಾತಾವರಣಕ್ಕೆ ಹರಡುತ್ತವೆ.

ಪ್ರತಿಯೊಂದು ಕೆಲಸವನ್ನೂ ಭಗವಂತನ ಸೇವೆ ಎಂದು ಪರಿಗಣಿಸಬೇಕು. **ಯದ್ಯತ್ಕರ್ಮ ಕರೋಮಿ ತತ್ತ ದಖಿಲಂ ಶಂಭೋ ತವಾರಾಧನಮ್**—ಎಲ್ಲ ಕರ್ಮವೂ ಭಗವದಾರಾಧನೆಯೇ ಎಂಬ ಶಂಕರಾಚಾರ್ಯರಚಿತ ಸ್ತುತಿಯಿದೆ. ನಮ್ಮ ಪೂರ್ವಜರು ಒಂದು ಪೊರಕೆಯನ್ನೂ ಕೂಡ ಕಾಲಿನಿಂದ ತಳ್ಳಬಾರದೆಂದು

ಎಚ್ಚರಿಸುತ್ತಿದ್ದರು. ಹೀಗೆ ಸದ್ಭಾವನೆಯಿಂದ ಒಡಗೂಡಿದ, ನಿಃಸ್ವಾರ್ಥವಾಗಿ, ಫಲಾಪೇಕ್ಷೆಯಿಲ್ಲದೆ ಮಾಡಿದ ಕರ್ತವ್ಯ ನಿರ್ವಹಣೆ ಸೇವೆಯಾಗುತ್ತದೆ.

ಸೇವಾಧರ್ಮ ಎಲ್ಲರಿಗೂ ಸುಲಭ ಸಾಧ್ಯವಾದುದಲ್ಲ. **ಸೇವಾಧರ್ಮಃ ಪರಮಗಹನಃ ಯೋಗಿನಾಮಪ್ಯಗಮ್ಯಃ**"—"ಸೇವಾಧರ್ಮವು ಅತ್ಯಂತ ಗಹನವಾದುದು, ಯೋಗಿಗಳ ತಿಳುವಳಿಕೆಗೂ ಮೀರಿದ್ದು" ಎಂಬುದಾಗಿ ಮಹಾತ್ಮರು ಹೇಳಿದ್ದಾರೆ.

ಸೇವಾಧರ್ಮದಿಂದ ಮನಸ್ಸು ಪರಿಪಕ್ವವಾದಾಗ ಆತ್ಮೋನ್ನತಿಗೆ ನೆರವಾಗುವ ಜಪ, ತಪ, ಭಗವನ್ನಾಮಸ್ಮರಣೆ, ಧ್ಯಾನ, ಸತ್ಸಂಗ, ಅಧ್ಯಯನ ಮುಂತಾದವುಗಳ ಕಡೆ ಪ್ರೇರಣೆ ಒದಗುತ್ತದೆ.

ಪ್ರತಿಯೊಂದು ಕ್ಷೇತ್ರ(ಹಂತ)ದಲ್ಲೂ ಪ್ರಾಮಾಣಿಕವಾಗಿ ಕರ್ತವ್ಯವನ್ನು ನಿರ್ವಹಿಸಿದರೆ ಅದರಿಂದ ವ್ಯಕ್ತಿಯ ಮತ್ತು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಉಂಟಾಗುತ್ತದೆ. ಸಮಾಜದಲ್ಲಿ ಅಭದ್ರತೆ, ಅರಕ್ಷಣೆ, ಭಯ, ಭೀತಿ, ಇವುಗಳಿಗೆಲ್ಲ ಕಾರಣ ವ್ಯಕ್ತಿ ತನ್ನ ಕ್ಷೇತ್ರದಲ್ಲಿ, ಕರ್ತವ್ಯದಲ್ಲಿ ತೋರುವ ನಿರ್ಲಕ್ಷ್ಯ, ಉದಾಸೀನತೆ, ವಿಳಂಬ ನೀತಿ, ತಿರಸ್ಕಾರ, ಶ್ರಮಕ್ಕಿಂತ ಅಧಿಕವಾದ ಫಲಾಪೇಕ್ಷೆ—ಇತ್ಯಾದಿ. ಈ ಮಾರಕವಾದ ಗುಣಗಳು ಪ್ರತಿ ಕ್ಷೇತ್ರವನ್ನೂ ಕಿತ್ತುತಿನ್ನುತ್ತಿದ್ದು, ವ್ಯಕ್ತಿಯ, ಸಮಾಜದ ಏಳ್ಗೆಗೆ ಬೇಕಾದ ತ್ಯಾಗ, ನಿಃಸ್ವಾರ್ಥ ಭಾವನೆಗಳು ಅಸ್ತವಾಗಿವೆ. ಇದರಿಂದಾಗಿ ವ್ಯಕ್ತಿಯ ಪ್ರಪಂಚ ಸಣ್ಣದಾಗುತ್ತಿದೆ. ನಮ್ಮ ಅಲ್ಪತೆಯನ್ನು ಮೀರಿ, ವೈಶಾಲ್ಯತೆಯಲ್ಲಿ ನಮ್ಮನ್ನು ಗುರುತಿಸಿಕೊಂಡು ಸಮಷ್ಟಿಯ ಹಿತವನ್ನು ಬಯಸುವ ಪ್ರವೃತ್ತಿಯೇ ನಮ್ಮಲ್ಲಿ ಇಲ್ಲವಾಗಿದೆ. ಈಗಲೂ ಕಾಲ ಮಿಂಚಿಲ್ಲ. ಎಚ್ಚರಗೊಂಡು ಮುಂದುವರೆಯಲು ಅವಕಾಶವಿದೆ. ಈ ನಿಟ್ಟಿನಲ್ಲಿ ಗೀತಾಚಾರ್ಯನ ಕರ್ಮಯೋಗದ ಅನುಸಂಧಾನ ನಮಗೆ ನೆರವಾಗುವುದು.

ಧರ್ಮಕ್ಷೇತ್ರ, ಕಾರ್ಯಕ್ಷೇತ್ರಗಳನ್ನು ಬೇರ್ಪಡಿಸುವಂತಿಲ್ಲ—ಬೇರ್ಪಡಿಸಬಾರದು. ಅನೇಕರು ಹಾಗೆ ಮಾಡಿ ಇಬ್ಬಗೆಯ ಜೀವನ ನಡೆಸುತ್ತಾರೆ. ಅವರು ದೇವಸ್ಥಾನಕ್ಕೆ ಹೋದಾಗ ಧಾರ್ಮಿಕರು, ವ್ಯವಹಾರ ನಡೆಸುವಾಗ ಅಧಾರ್ಮಿಕರು—ಸುಳ್ಳು ಹೇಳುವುದು, ಮೋಸ ಮಾಡುವುದು ಎಲ್ಲ ಮಾಡುತ್ತಾರೆ. ವ್ಯವಹಾರದಲ್ಲಿ ಪ್ರಾಮಾಣಿಕರಾಗಿರುವುದಕ್ಕೆ ಆಗುವುದೇ ಇಲ್ಲ ಎಂದು ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ರೀತಿ ಅನೈತಿಕ ವ್ಯವಹಾರ ನಡೆಸುತ್ತ, ತುಂಬ ದಾನ ಧರ್ಮಾದಿಗಳನ್ನು ಮಾಡುತ್ತ, ದೇವಸ್ಥಾನ ಧಾರ್ಮಿಕ ಸಂಸ್ಥೆಗಳೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳುತ್ತ ಮಹಾ ಧಾರ್ಮಿಕ ವ್ಯಕ್ತಿಗಳೆಂದು ಸಮಾಜದಲ್ಲಿ ಮೆರೆಯುತ್ತಾರೆ. ಇದರಿಂದ ಸಮಾಜದಲ್ಲಿ ನೈತಿಕ ತಳಹದಿ ಕುಸಿಯುತ್ತ ಹೋಗುತ್ತದೆ. ಧರ್ಮ ನಿಜವಾಗಿಯೂ ಸಮಾಜಸೌಧವನ್ನು ಎತ್ತಿ ಹಿಡಿಯಬೇಕಾದರೆ ಅದು ಎಲ್ಲ ಸಾಮಾಜಿಕ ಕಾರ್ಯಕ್ಷೇತ್ರದಲ್ಲೂ ಕಾರ್ಯಕಾರಿಯಾಗಬೇಕು.

ಇಲ್ಲಿ ಧರ್ಮವೆಂದರೆ ಯಾವುದೋ ಮತತತ್ತ್ವವನ್ನು ಅನುಸರಿಸುವುದೆಂದಲ್ಲ. ನಮ್ಮ ಜೀವನದ ಪ್ರತಿಯೊಂದು ಆಗುಹೋಗುಗಳೂ ವ್ಯಾಪಾರ ವ್ಯವಹಾರಗಳೂ ನೀತಿಬದ್ಧವಾಗಿರಬೇಕು. ಅದೇ ನಿಜವಾದ ಧಾರ್ಮಿಕ ಜೀವನ. ಅದರಿಂದ ಮಾತ್ರವೇ ಭಗವಂತನು ನಿಜವಾಗಿ ಸಂತೃಪ್ತನಾಗುತ್ತಾನೆ. ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ—**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ** (ಗೀತೆ,೧೮.೪೬)—"ಮಾನವನು ತನ್ನ ಪಾಲಿನ ಕರ್ಮಗಳ ಮೂಲಕ ಭಗವಂತನನ್ನು ಅರ್ಚಿಸುತ್ತ ಸಿದ್ಧಿಯನ್ನು ಪಡೆಯುತಾನೆ." ಆದರೆ ಆ ಕರ್ಮ ನೈತಿಕ ಪರಿಪೂರ್ಣತೆಯಿಂದ ಕೂಡಿರಬೇಕು, ಇಲ್ಲದಿದ್ದರೆ ಅದು ಅರ್ಚನೆಯಾಗುವುದಿಲ್ಲ. ನಾವು ದೇವರನ್ನು ಅರ್ಚಿಸುವಾಗ ಉತ್ತಮ ವಸ್ತುಗಳನ್ನೇ ಅವನಿಗೆ ನೀಡುತ್ತೇವೆ, ಕೆಟ್ಟಿರುವುದನ್ನು ಅವನಿಗೆ ಅರ್ಪಿಸುವುದಿಲ್ಲ. ಹಾಗೆಯೇ ನಾವು ಮಾಡುವ ಕರ್ಮವೂ ಉತ್ತಮವಾಗಿರಬೇಕು, ಅನೀತಿಯ ಹುಳುಕು ಅದರಲ್ಲಿ ಇರಬಾರದು. ಆಗಲೇ ಅದು ಭಗವದರ್ಚನೆಯಾಗುತ್ತದೆ.

ಹೀಗೆ ನಮ್ಮ ಕರ್ಮಕ್ಷೇತ್ರವನ್ನು ಧರ್ಮಕ್ಷೇತ್ರವನ್ನಾಗಿ ಪರಿವರ್ತಿಸುವುದೇ ಭಗವದ್ಗೀತೆಯ ಮುಖ್ಯ ಸಂದೇಶ. ಸ್ವಾಮಿ ವಿವೇಕಾನಂದರ ಧಾರ್ಮಿಕ ನಿಲುವನ್ನು ಕುರಿತು ಹೇಳುತ್ತ ಸೋದರಿ ನಿವೇದಿತಾ ಹೇಳುತ್ತಾರೆ: "ಎಲ್ಲ ಬಗೆಯ ಕಾರ್ಯ, ಎಲ್ಲ ಬಗೆಯ ಹೋರಾಟ, ಎಲ್ಲ ಬಗೆಯ ಸೃಷ್ಟಿ ಸಾಕ್ಷಾತ್ಕಾರದ ವಿವಿಧ ಮಾರ್ಗಗಳು. ಇದು ಲೌಕಿಕ ಇದು ಆಧ್ಯಾತ್ಮಿಕ ಎಂಬ ಭೇದ ಇನ್ನಿಲ್ಲ. ದುಡಿಮೆಯೇ ಪ್ರಾರ್ಥನೆ, ಜೀವನವೇ ಧರ್ಮ."

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಮೇ 2002**

| | | |
|---|---|---|
| 8 | ಬುಧವಾರ | ಏಕಾದಶಿ |
| 14 | ಮಂಗಳವಾರ | ಶ್ರೀಬಸವೇಶ್ವರ ಜಯಂತಿ (ಅಕ್ಷಯ ತೃತೀಯಾ) |
| 17 | ಶುಕ್ರವಾರ | ಶ್ರೀಶಂಕರ ಜಯಂತಿ<br>ಶ್ರೀರಾಮಾನುಜ ಜಯಂತಿ |
| 22 | ಬುಧವಾರ | ಏಕಾದಶಿ |
| 26 | ಭಾನುವಾರ | ಬುದ್ಧಪೂರ್ಣಿಮಾ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ